<u>2 ನೇ ಹೆಚ್ಚುವರಿ ದಿವಾಣಿ ಮತ್ತು ಜೆ.ಎಮ್.ಎಫ್.ಸಿ. ನ್ಯಾಯಾಲಯ ಗೋಕಾಕ.</u>

ಸಿ.ಸಿ. ನಂ.864/2012
ಸಿಡಬ್ಲ್ಯೂ.2 ಪಿಡಬ್ಲ್ಯೂ1

| | | |
|---|---|---|
| ಸಾಕ್ಷಿಯ ಹೆಸರು | - | ಶಿವಗೌಡ ಸಣ್ಣತಮ್ಮಪ್ಪ ಬಡವಗೋಳ |
| ವಯಸ್ಸು | - | 46 ವರ್ಷ |
| ಉದ್ಯೋಗ | - | ಶೇತ್ಕಿ |
| ವಾಸ | - | <u>ತವಗ</u> |

<u>ದಿನಾಂಕಃ 19-07-2022 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>

<u>ಮುಖ್ಯ ವಿಚಾರಣೆ : ಮಾನ್ಯ.ಸ.ಸ.ಅ.ರವರಿಂದಃ</u>

ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಿದ್ದು ಅದು ಅಬಕಾರಿ ರೇಡ್ ಪಂಚನಾಮೆಯಾಗಿದ್ದು , ಅದರಲ್ಲಿರುವ ಸಹಿಗಳನ್ನು ಸಾಕ್ಷಿ ಗುರುತಿಸಿದ್ದು , ಪಂಚನಾಮೆಯನ್ನು ನಿಪಿ-1, ಸಾಕ್ಷಿಯ ಸಹಿಯನ್ನು ನಿಪಿ-1(ಎ) ಮತ್ತು 1(ಬಿ) ಎಂದು ಗುರುತಿಸಲಾಯಿತು. ನನ್ನನ್ನು ಪೊಲೀಸರು ದಾಳಿ ಪಂಚರನ್ನಾಗಿ ಕರೆದುಕೊಂಡು ಹೋಗಿರುವುದಿಲ್ಲ . ಯಾವುದೇ ವಸ್ತುಗಳನ್ನು ವಶಪಡಿಸಿಕೊಂಡಿರುವುದಿಲ್ಲ, ನಿಪಿ-1 ರಲ್ಲಿ ಬರೆದ ವಿಷಯ ನನಗೆ ಗೊತ್ತಿರುವುದಿಲ್ಲ . ಸುಮಾರು 10 ವರ್ಷಗಳ ಹಿಂದೆ ಪೊಲೀಸ ಠಾಣೆಯಲ್ಲಿ ಪೊಲೀಸರು ನನ್ನ ಸಹಿಗಳನ್ನು ಪಡೆದುಕೊಂಡಿರುತ್ತಾರೆ. ಚಾಸಾ-3 ರವರ ಪರಿಚಯ ಇರುವುದಿಲ್ಲ, ಆರೋಪಿತರನ್ನು ಈ ಹಿಂದೆ ನೋಡಿರುವುದಿಲ್ಲ.

(ಈ ಹಂತದಲ್ಲಿ ಮಾನ್ಯ ಸ.ಸ.ಅ. ರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿಯನ್ನು ಕೇಳಿದರು, ನೀಡಲಾಯಿತು.)

<u>ಪಾಟೀ ಸವಾಲುಃ ಮಾನ್ಯ.ಸ.ಸ.ಅ.ರವರಿಂದಃ</u>

ದಿಃ 1-2-2012 ರಂದು ಸಂಜೆ 6-30 ಗಂಟೆಗೆ ನಾನು ಬೆಣಚಿನಮರಡಿ ಗ್ರಾಮದ ಬಸ್ಟಾಂಡ ಹತ್ತಿರ ಇದ್ದಾಗ , ಗ್ರಾಮೀಣ ಪೊಲೀಸರು ನನ್ನನ್ನು ಪಂಚರನ್ನಾಗಿ ಅವರ ಸಂಗಡ ಕರೆದುಕೊಂಡು ಹೋಗಿ ಖಚಿತವಾದ ಬಾತ್ಮಿ ಬಂದ ವಿಷಯ ತಿಳಿಸಿ ಮಮದಾಪುರ ಗ್ರಾಮದ ಪೋಸ್ಟ ಆಫೀಸ ಹತ್ತಿರ ರೇಡ ಮಾಡಿ ಇಬ್ಬರು ವ್ಯಕ್ತಿಗಳನ್ನು ಹಿಡಿದುಕೊಂಡು ಒಬ್ಬ ವ್ಯಕ್ತಿಯ ಹೆಸರನ್ನು ಕೇಳಲಾಗಿ ಅವನು ಯಮನಪ್ಪ ಪುಂಡಲೀಕ ಮಲನಾಡಿ ಎಂದು ತಿಳಿಸಿದ್ದು ಅವನ ವಶದಲ್ಲಿದ್ದ 180 ಎನ ಎಲ್ ನ 180 ಓಟಿ ಕಂಪನಿಯ ವಿಸ್ಕಿ ಕ್ವಾಟರ ಬಾಟಲಗಳನ್ನು ಹಾಗೂ ಅವನ ತಾಬಾದಲ್ಲಿದ್ದ ರೂ.6 ಸಾವಿರಗಳನ್ನು ಮತ್ತು 02 ಗಾಜಿನ ಗ್ಲಾಸಗಳನ್ನು ಮತ್ತು ಇನ್ನೊಬ್ಬನ ಹೆಸರು

ಕೇಳಲಾಗಿ ಅವನು ಬಸಪ್ಪ ಭೀಮಪ್ಪ ಪಟಾತ ಎಂದು ಹೇಳಿದ್ದು ಅವನ ವಶದಲ್ಲಿದ್ದ 180 ಎಂ ಎಲನ 200 ಅವರ್ಸ ಚಾಯ್ಸು ವಿಸ್ಕಿ ಬಾಟಲಗಳನ್ನು ಮತ್ತು 180 ಎಂಎಲನ 51 ಹೈವರ್ಡ್ಸ ವಿಸ್ಕಿ ಬಾಟಲಿಗಳನ್ನು ಅವನ ತಾಬಾದಿಂದ ರೂ.250/- ಗಳನ್ನು ವಶಪಡಿಸಿಕೊಂಡು ಅನುಕ್ರಮ ಸಂಖ್ಯೆ 1 ರಿಂದ 3 ಇವುಗಳಿಂದ ಒಂದೊಂದು ಬಾಟಲಿಗಳನ್ನು ರಾಸಾಯನಿಕ ಪರೀಕ್ಷೆಗಾಗಿ ಪ್ರತ್ಯೇಕವಾಗಿ ತೆಗೆದಿರಿಸಿ ಬಿಳಿ ಬಟ್ಟೆಯಲ್ಲಿ ಹಾಕಿ ಗೋಕಾಕ ಗ್ರಾಮೀಣ ಠಾಣೆಯ ಅರಗಿನ ಶೀಲ ಮಾಡಿ ಅಬಕಾರಿ ಅಧಿಕಾರಿಗಳು ತಮ್ಮ ತಾಬಾಕ್ಕೆ ಪಡೆದುಕೊಂಡು ರಸ್ತೆಯ ಲೈಟ ಬೆಳಕಿನಲ್ಲಿ 19-35 ಗಂಟೆಯಿಂದ 21-00 ಗಂಟೆಯವರೆಗೆ ಜರುಗಿಸಿ ಸ್ಥಳದಲ್ಲಿ ಪಂಚನಾಮೆ ಬರೆದು ಓದಿ ಹೇಳಿ ನಿಪಿ-1 ಕ್ಕೆ ನನ್ನ ಸಹಿಯನ್ನು ಪಡೆದುಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಈಗ ಆರೋಪಿತರೊಂದಿಗೆ ರಾಜಿ ಆಗಿ ಆರೋಪಿಗೆ ಅನುಕೂಲವಾಗಲೆಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸ.ಅ.

2 ನೇ ಹೆಚ್ಚುವರಿ ದಿವಾಣಿ ನ್ಯಾಯಾಧೀಶರು ಹಾಗೂ
ನ್ಯಾಯಿಕ ದಂಡಾಧಿಕಾರಿಗಳು, ಗೋಕಾಕ.